ಇಂದು ದಿನಾಂಕಃ 01-08-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ವಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ ಎಸ.ಎಸ.ಎಂ. ವಕೀಲರಿಂದಃ-

ನನ್ನ ವಯಸ್ಸು 50 ವರ್ಷ. ನಾನು ಹೊಲದಲ್ಲಿ ಕೆಲಸ ಮಾಡುತ್ತೇನೆ. ನಾನು ನಾಗೂರುದಲ್ಲಿ ವಾಸವಿದ್ದೇನೆ. ನನ್ನ ಗಂಡನ ಹೆಸರು ಬಸವರಾಜ. ನನ್ನ ತಂದೆ ಹೆಸರು ಭೀಮಶಾ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಾಯಿ ಹೆಸರು ಬಸಮ್ಮ. ನನ್ನ ತಾಯಿಯ ತವರು ಮನೆ ಭುಯ್ಯಾರ ಇರುತ್ತದೆ. ನಾನು ಬೆಳೆದ ಊರು ಭುಯ್ಯಾರ ಎಂದರೆ ಸರಿ. ನನಗೆ 3 ಜನ ಸೋದರ ಮಾವಂದಿರು ಅವರಲ್ಲಿ ಒಬ್ಬರು ಮೃತಪಟ್ಟಿರುತ್ತಾರೆ ಇಬ್ಬರು ಜೀವಂತ ಇರುತ್ತಾರೆ. ನಾನು ನನ್ನ ಸೋದರ ಮಾವಂದಿರ ಜೂತೆ ಬೆಳೆದಿದ್ದೇನೆ. ನನ್ನ ಸೋದರ ಮಾವಂದಿರು ನನಗಿಂತ ವಯಸ್ಸಿನಲ್ಲಿ ದೊಡ್ಡವರು.

ಭೀಮಶಾ ರವರು ಮೃತಪಟ್ಟು 10 ರಿಂದ 11 ವರ್ಷಗಳಾಗಿದೆ. ಯಾವ ದಿನಾಂಕಂದಂದು ಅಥವಾ ವರ್ಷದಂದು ಮೃತಪಟ್ಟಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಈ ದಾವೆ ಸಲ್ಲಿಸಿ 2 ವರ್ಷಗಳಾಗಿವೆ. ದಾವೆ ಸಲ್ಲಿಸುವಾಗಲೂ ಸಹ ಭೀಮಶಾ ರವರು ಮೃತಪಟ್ಟು 11 ವರ್ಷಗಳು ಆಗಿವೆ ಎಂದು ಉಲ್ಲೇಖಿಸಿದ್ದು ಈಗಲೂ ಸಹ ಮೃತಪಟ್ಟು 11 ವರ್ಷಗಳಾಗಿವೆ ಎಂದರೆ ಸಾಕ್ಷಿ ಮೃತಪಟ್ಟು 10 ರಿಂದ 11 ವರ್ಷಗಳಾಗಿವೆ ಎಂದು ನುಡಿಯುತ್ತಾರೆ.

ದಾವಾ ಜಮೀನುಗಳು ಚಂಗಟಾನಲ್ಲಿವೆ. ದಾವಾ ಜಮೀನುಗಳಿಗೆ ನಾನು ಹೋಗಿದ್ದೇನೆ. ಸರ್ವೆ ನಂ. 60/1 ಎಷ್ಟು ವಿಸ್ತೀರ್ಣ ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮ್ಮ ಜಮೀನುಗಳ ಒಟ್ಟು ವಿಸ್ತೀರ್ಣ 5 ಎಕರೆ ಇದೆ ಎಂದು ನುಡಿಯುತ್ತಾರೆ. ಚೇಂಗಟಾದಲ್ಲಿ ನೀವು ಬೆಳೆದಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೋಗಿಬರುವುದು ಮಾಡುತ್ತೆವೆ ಎಂದು ನುಡಿಯುತ್ತಾರೆ. ಭೀಮಶಾ ರವರ ಮೃತಪಟ್ಟಾಗ ನಾನು ಅವರ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೆ. ಮೃತ ಬಸಮ್ಮ ರವರು ಭೀಮಶಾ ರವರ ಮೊದಲನೇ ಹೆಂಡತಿ ಎಂದರೆ ಸಾಕ್ಷಿ ನನ್ನ ತಾಯಿ ಬಸಮ್ಮ 1ನೇ ಹೆಂಡತಿ ಹಾಗೂ ಮೃತ ಬಸಮ್ಮ 2ನೇ ಹೆಂಡತಿ ಎಂದು ನುಡಿಯುತ್ತಾರೆ. ನನ್ನ ತಾಯಿ ಭುಯ್ಯಾರದಲ್ಲಿ ವಾಸವಿದ್ದಾರೆ. ನಾನು ಭುಯ್ಯಾರ ಗ್ರಾಮದಲ್ಲಿಯೇ ಜನಿಸಿದ್ದೇನೆ. ಭೀಮಶಾ ರವರ ಮೊದಲನೇ ಹೆಂಡತಿಯಾದ ಬಸಮ್ಮ ರವರಿಗೆ ನಾನು ಒಬ್ಬಳೇ ಮಗಳು. ಇನ್ನೊಬ್ಬ ಬಸಮ್ಮ ರವರಿಗೆ 1 ರಿಂದ 3ನೇ ಪ್ರತಿವಾದಿಯರು ಮಕ್ಕಳು ಇರುತ್ತಾರೆ. 1ನೇ ಪ್ರತಿವಾದಿಯ ವಯಸ್ಸು 55 ವರ್ಷ ಇದೇಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಅವರು ನನಗಿಂತ ಚಿಕ್ಕವರು ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿಯರು ಹೈದರಾಬಾದಿಲ್ಲಿ ವಾಸವಿದ್ದಾರೆ. 3ನೇ ಪ್ರತಿವಾದಿ ನಾಗೂರಿನಲ್ಲಿ ವಾಸವಿದ್ದಾರೆ.

ಸರ್ವೆ ನಂ. 60/1 ರ ಜಮೀನಿನ ಚೆಕ್ಕುಬಂದಿ ನನಗೆ ನೆನಪಿಲ್ಲ. ಜಮೀನಿಗೆ ಹೋಗಿ ಬರುತ್ತಿದ್ದರೆ ಅಕ್ಕ ಪಕ್ಕದ ಜಮೀನಿನ ಮಾಲೀಕರ ಹೆಸರು ಏನು ಎಂದು ಪ್ರಶ್ನಿಸಿದಾಗ ಸಾಕ್ಷಿ ಅಂಬರಾವ ರವರ ಜಮೀನು, ಸುಬಣ್ಣ ರವರ ಜಮೀನು, ಸಿದ್ರಾಮ ರವರ ಜಮೀನು, ಸಿದ್ದಯ್ಯ ರವರ ಜಮೀನು, ರೇವಣ್ಣ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 182/1 ರಲ್ಲಿ ಎಷ್ಟು ವಿಸ್ತೀರ್ಣ ದಾವಾ ಜಮೀನು ಇದೆ ಎಂದು ಎಂದು ಪ್ರಶ್ನಿಸಿದಾಗ ಸಾಕ್ಷಿ 3.5 ಎಕರೆ ಜಮೀನು ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 182/1 ರ ಒಟ್ಟು ವಿಸ್ತೀರ್ಣ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮಗೆ ಸೇರಿರುವ ಒಟ್ಟು 5 ಎಕರೆ ಜಮೀನು ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 182/1ರಲ್ಲಿ ಭೀಮಶಾ ರವರ ಸಹೋದರರ ಜಮೀನು ಸಹ ಇವೆ ಎಂದರೆ ಸರಿ. ಸರ್ವ ನಂ. 182/1 ರ ಜಮೀನಿನ ಚೆಕ್ಕುಬಂದಿ ನನಗೆ ನೆನಪಿಲ್ಲ.

1 ರಿಂದ 3ನೇ ಪ್ರತಿವಾದಿಯರು ಚೆಂಗಟಾ ಗ್ರಾಮದಲ್ಲಿ ಹುಟ್ಟಿ ಅಲ್ಲೇ ಬೆಳೆದಿದ್ದಾರೆ ಎಂದರೆ ಸರಿ. 1 ರಿಂದ 3ನೇ ಪ್ರತಿವಾದಿಯರು ಭೀಮಶಾ ರವರ ಮನೆಯಲ್ಲಿ ದೊಡ್ಡವರಾಗಿದ್ದಾರೆ ಎಂದರೆ ಸರಿ. 1ನೇ ರಿಂದ 3ನೇ ಪ್ರತಿವಾದಿಯರ ಮದುವೆ ಭೀಮಶಾ ರವರೇ ಮಾಡಿದ್ದಾರೆ ಎಂದರೆ ಸರಿ. ನನ್ನ ತಾಯಿ ಭೀಮಶಾ ರವರು ತಮಗೆ ಪಾಲು ಬೇಕು ದಾವೆ ಸಲ್ಲಿಸಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಇದೆ ದಾವೆಯಲ್ಲಿ ನನ್ನ ತಾಂ ಪಾಲು ಬೇಕು ಎಂದು ನುಡಿಯುತ್ತಾರೆ. ಜೀವನಾಂಶಕ್ಕಾಗಿ ನಿಮ್ಮ ತಾಯಿ ಭೀಮಶಾ ರವರ ವಿರದ್ದ ಅರ್ಜಿ ಸಲ್ಲಿಸಿದ್ದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಮೊದಲು ಸಲ್ಲಿಸಿಲ್ಲ ಈಗ ಪಾಲು ಬೇಕು ಎಂದು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ.

<u>ಮುಂದಿನ ಪಾಟೀಸವಾಲಿಗೆ ಸಮಯ ನೀಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ